ಸರಕಾರಿ ಶಾಲೆಗೆ ಸೇರಿಸಿದರು. ಅಲ್ಲಿಂದ ಎಸ್ಸೆಸ್ಸೆಲ್ಸಿವರೆಗೆ ನನ್ನ ವಿದ್ಯಾಭ್ಯಾಸ ಮಾವಂದಿರ ಆಶ್ರಯದಲ್ಲೇ ಆಯಿತು. ನಮ್ಮ ಕುಟುಂಬದಲ್ಲಿ ಎಸ್ಸೆಸ್ಸೆಲ್ಸಿ ಓದಿದವರಲ್ಲಿ ನಾನೇ ಮೊದಲಿಗನಾದೆ!

ಹಾಗೆ ತಂದೆ ಇಲ್ಲದಿದ್ದರೂ ಮನೆಮಂದಿಯಿಂದ ನನಗೆ ವಿಶೇಷ ಪ್ರೀತಿ ಸಿಕ್ಕಿತ್ತು. ಮಾವಂದಿರೂ ಅಷ್ಟೇ. ಶಿಸ್ತಿನ ಸಿಪಾಯಿಗಳಾಗಿ ನನ್ನಲ್ಲಿ ಬದ್ಧತೆ, ಪ್ರಾಮಾಣಿಕತೆ ಮತ್ತು ಜೀವನಪ್ರೀತಿ ಬೆಳೆಯುವಂತೆ ಮಾಡಿದರು. ಸಾಹಿತ್ಯ ಪ್ರೀತಿಯ ಅವರು ಎಂಟನೇ ತರಗತಿ ತನಕ ಓದಿದ್ದರೂ 1950ರ ಆ ದಿನಗಳಲ್ಲೇ ಮನೋಹರ ಗ್ರಂಥಮಾಲೆ, ಮಿಂಚಿನ ಬಳ್ಳಿ ಗ್ರಂಥಮಾಲೆ, ಸಮಾಜ ಪುಸ್ತಕಾಲಯ, ವಿವೇಕ ಸಾಹಿತ್ಯಮಾಲೆಗಳ ಚಂದಾದಾರರಾಗಿದ್ದು, ದೈನಿಕ ಮತ್ತು ಸಾಪ್ತಾಹಿಕಗಳನ್ನೂ ತರಿಸಿಕೊಳ್ಳುತ್ತಿದ್ದರು. ಕೃಷ್ಣಮೂರ್ತಿ ಪುರಾಣಿಕರ ಸಾಮಾಜಿಕ, ಎನ್. ನರಸಿಂಹಯ್ಯನವರ ಪತ್ತೆದಾರಿ ಮತ್ತು ಶ್ರೀನಿವಾಸ ಕೊರಟಿಯವರ ಐತಿಹಾಸಿಕ ಕಾದಂಬರಿಗಳನ್ನು ನಾನು ಓದಿದ್ದು ಅಲ್ಲೇ. ಆದರೆ, ಓದುವ 'ಹುಚ್ಚು' ಹಿಡಿದಿದ್ದು ವಿನಯ ಗುರೂಜಿ ಅವರ 'ಶ್ಯಾಮನ ತಾಯಿ'ಯ ಮೂಲಕ. ನಾನು ಮಾವಂದಿರ ಮನೆಯಿಂದ ತವರಿಗೆ ಹೋದಾಗಲೆಲ್ಲ ನಮ್ಮ ಚಿಕ್ಕಪ್ಪ ದಿನಾ ಸಂಜೆ ಹಾಡುತ್ತಿದ್ದ ಪಾರ್ತಿಸುಬ್ಬ ಕವಿಯ 'ಪಂಚವಟಿ' ಪ್ರಸಂಗ; ಸೋದರತ್ತೆ ವಾಚಿಸುತ್ತಿದ್ದ ಕುಮಾರವ್ಯಾಸ ಭಾರತ; ಆಗೀಗ ಬರುತ್ತಿದ್ದ ಅಜ್ಜ ತಲೆಕಳ ರಾಂಭಟ್ಟರು ಬಂದಷ್ಟು ಸಲ ಪ್ರತಿರಾತ್ರೆಯೂ ಅಮೋಘವಾಗಿ ಹೇಳುತ್ತಿದ್ದ ಅಲ್ಲಾವುದ್ದೀನನ ಅದ್ಭುತ

